(22)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ, ದಿನಾಂಕ:14-08-2019ರ ನಡವಳಿಗಳು

ವಿಷಯದ ಸಂಖ್ಯೆ: ವಾಕಾಸ್ಥಾಸ/151/2019-20

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ದಾಸರಹಳ್ಳಿ ವಲಯಕ್ಕೆ ಸೇರಿರುವ ವಾರ್ಡ್-13ಕ್ಕೆ 2018-19ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ ಪಿ-3235 ಅಡಿಯಲ್ಲಿ ಪ್ರಸ್ತಾಪಿತ ಕಾಮಗಾರಿಗೆ ಜಾಬ್ ಕೋಡ್ ಪಡೆದಿದ್ದು, ವಿವರಗಳು ಈ ಕೆಳಕಂಡಂತೆ ಇರುತ್ತದೆ.

Sl No	Name of work	Est cost Rs in lakhs	Job code No	Randamisation Done or not
1.	Improvements works at Mustering center for Pourakarmikas (Balance portion) in ward No.13	25.00	013-19-000081	yes

ಈ ಮೇಲ್ಕಾಣಿಸಿದ ಕಾಮಗಾರಿಯನ್ನು ಪಾಲಿಕೆಯ ಮುಖ್ಯ ಅಭಿಯಂತರರು (ದಾಸರಹಳ್ಳಿ ವಲಯ) ರವರು ಪ್ರಸ್ತಾಪಿತ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಮೆ:ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಮುಖಾಂತರ ನಿರ್ವಹಿಸಲು ಅನುಮೋದನೆ ಕೋರಿರುತ್ತಾರೆ.

ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ (ಸಂಗ್ರಹಣೆ ಕೋಶ) ಆದೇಶ ಸಂಖ್ಯೆ:ಆಇ/541/ವೆಚ್ಚ-12/2019, ದಿನಾಂಕ:29-05-2019 ರಲ್ಲಿ ಸರ್ಕಾರದ ಇಲಾಖೆಗಳು ಮತ್ತು ಇತರೆ ಸಂಗ್ರಹಣಾ ಸಂಸ್ಥೆಗಳು ಕರ್ನಾಟಕ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ (ಕೆ.ಆರ್.ಐ.ಡಿ.ಎಲ್) ಸಂಸ್ಥೆಯ ಮೂಲಕ ಗರಿಷ್ಟ ರೂ.2.00 ಕೋಟಿಗಳ ಮಿತಿಯಲ್ಲಿ ಕೈಗೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ 2019-20ನೇ ಸಾಲಿಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ. ಈ ವಿಚಾರದಲ್ಲಿ ಮಾನ್ಯ ಆಯುಕ್ತರು ಕಛೇರಿ ಟಿಪ್ಪಣಿ ಸಂಖ್ಯೆ:673/2019-20, ದಿನಾಂಕ;10-06-2019ರಂತೆ ಪಾಲಿಕೆಯ ವತಿಯಿಂದ 2019-20ನೇ ಸಾಲಿನ ಪಾಲಿಕೆಯ ಆಯವ್ಯಯದಲ್ಲಿ ನಿಗದಿಪಡಿಸಿದ ಅನುದಾನದ ಕಾಮಗಾರಿಗಳನ್ನು (ರಾಜ್ಯ ಹಣಕಾಸು ಆಯೋಗದ ಅನುದಾನ, 14ನೇ ಹಣಕಾಸು ಆಯೋಗದ ಅನುದಾನ, ಸ್ವಚ್ಚ ಭಾರತ್ ಮತ್ತು ಘನ ಸರ್ಕಾರದ ಅನುಮೋದಿತ ಕಾಮಗಾರಿಗಳನ್ನು ಹೊರತುಪಡಿಸಿ) ಸಂಬಂಧಪಟ್ಟ ಸ್ಥಾಯಿ ಸಮಿತಿ ಅನುಮೋದನೆ ಪಡೆದು ತದನಂತರ ಸರ್ಕಾರದ ಆರ್ಥಿಕ ಇಲಾಖೆಯವರು ನೀಡಿರುವ ಷರತ್ತುಗಳಿಗೆ ನಿಯಮಾನುಸಾರವಾಗಿ ಕ್ರಮವಹಿಸಿ ಮೆ:ಕೆ.ಆರ್.ಐ.ಡಿ.ಎಲ್. ಮುಖಾಂತರ ಅನುಷ್ಠಾನಗೊಳಿಸಲು ಸೂಚಿಸಲಾಗಿದೆ.

ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಪತ್ರದ ಸಂಖ್ಯೆ:ನಅಇ/497/ಎಂ.ಎನ್.ವೈ 2016 (ಭಾಗ-1) ದಿನಾಂಕ:07-07-2017 ರ ಆದೇಶದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಮೆ:ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ವತಿಯಿಂದ (performance security) ಪಡೆಯಲು ಸರ್ಕಾರದ ಆದೇಶ ಸಂಖ್ಯೆ:ಎಫ್.ಡಿ/4/ಪಿ.ಸಿ.ಎಲ್./2008, ದಿನಾಂಕ:14/10/2008 ರಂತೆ ಕ್ರಮ ತೆಗೆದುಕೊಳ್ಳಲು ಆದೇಶ ನೀಡಿರುವ ಮೇರೆಗೆ ಮತ್ತು ಈ ವಿಚಾರದಲ್ಲಿ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರು ಟಿಪ್ಪಣಿ ಸಂಖ್ಯೆ:6282/2018-19, ದಿನಾಂಕ:16-01-2019 ರಲ್ಲಿ ಕಾಮಗಾರಿಗಳಿಗೆ ಕರಾರು ಪತ್ರದಲ್ಲಿ ಅಳವಡಿಸಿಕೊಳ್ಳಲು ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಲಾಗಿರುತ್ತದೆ.

Scanned with CamScann

ಈ ಹಿನ್ನೆಲೆಯಲ್ಲಿ ಮಾನ್ಯ ಆಯುಕ್ತರವರ ಆದೇಶದಂತೆ ವಾರ್ಡ್-13ರಲ್ಲಿ ಪ್ರಸ್ತಾಪಿತ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಮೆ:ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ವಹಿಸಿಕೊಡುವ ಬಗ್ಗೆ ಸೂಕ್ತ ನಿರ್ಣಯ ಕೋರಿ ಸಮಿತಿಯ ಮುಂದೆ ಮಂಡಿಸಲು ಮಾನ್ಯ ಆಯುಕ್ತರು ಸಂಖ್ಯೆ:ಪಿ.ಎಸ್.ಆರ್.(ಜಿ)1289/2019-20, ದಿನಾಂಕ:08-07-2019 ರಂತೆ ಅನುಮೋದಿಸಿ ಮೇರೆಗೆ ಪ್ರಧಾನ ಅಭಿಯಂತರರ ಕಛೇರಿ ಸಂಖ್ಯೆ:3089/2019-20, ದಿನಾಂಕ:30-07-2019 ರಂತೆ ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಪ್ರಧಾನ ಅಭಿಯಂತರರವರ ದಿನಾಂಕ:30-07-2019ರ ಟಿಪ್ಪಣಿ

ನಿರ್ಣಯ:- ಪ್ರಧಾನ ಅಭಿಯಂತರವರ ದಿ|30|07|19ರ ಟಿಪ್ಪಣಿಯ ಅಂಶದ ಮಂಜೂರಿಗೆ ಶಿಫಾರಸಿನೊಂದಿಗೆ ಶಿಫಾರಸಾಲಾಯಿತು, ತುರ್ತಾಗಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವ ವಿಚಕ್ಷಣೆಗೆ ಇರುವುದಾಗಿ ಅಭಿಪ್ರಾಯ ವ್ಯಕ್ತವಾದ ಅನ್ವಯವಿಂದ್ದು, ಪ್ರಸ್ತಾವಿತ ಕಾಮಗಾರಿಯನ್ನು ಮೆ: ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಮುಖೇನ ಕೈಗೊಳ್ಳಲು ನಿಯಮಾನುಸಾರ ಆಯುಕ್ತರು ಅಗತ್ಯ ಕ್ರಮ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು

ಅಧ್ಯಕ್ಷರು
ರಚಿಸಲ್ಪಟ್ಟಿದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕ್ರ ಸಂ	ಶ್ರೀಯುತರ ಹೆಸರು	ಪದನಾಮ	ನಿರ್ಣಯದ ಪರವಾಗಿ ಸಹಿ
1	ಉಮೇಸಲ್ಮಾ	ಅಧ್ಯಕ್ಷರು	
2	ದೀಪಿಕಾ.ಎಲ್.ಮಂಜುನಾಥರೆಡ್ಡಿ	ಸದಸ್ಯರು	Deepika.L.Manjunatha Reddy
3	ಎಂ.ಶಾಮಲ	ಸದಸ್ಯರು	M. Shamala
4	ಇಂದಿರಾ.ಜಿ	ಸದಸ್ಯರು	Candilla
5	ಜಯಲಕ್ಷ್ಮಮ್ಮ ಪಿಳ್ಳಪ್ಪ	ಸದಸ್ಯರು	
6	ಶ್ರೀಲತ ಸಿ.ಜಿ.ಗೋಪಿನಾಥರಾಜು	ಸದಸ್ಯರು	
7	ಕೆ.ದೇವದಾಸ	ಸದಸ್ಯರು	
8	ನೇತ್ರಾವತಿ ಕೃಷ್ಣೇಗೌಡ	ಸದಸ್ಯರು	Nethravathi
9	ಶಿಲ್ಪ ಅಭಿಲಾಶ್	ಸದಸ್ಯರು	
10	ಎನ್.ಮಂಜುನಾಥ್	ಸದಸ್ಯರು	
11	ಆರ್.ಪದ್ಮಾವತಿ ಅಮರನಾಥ್	ಸದಸ್ಯರು	N. Munjunath Padmavathi. R

Scanned with CamScanner